**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ**

**ಸಿ.ಸಿ.ಸಂಖ್ಯೆ.2081/2022**

ಫಿರ್ಯಾದುದಾರು: ಶ್ರೀ ಕೆ.ಎ.ವಿಶ್ವನಾಥ್,
ತಂದೆ: ಪೌತಿ ಅಯ್ಯಪ್ಪ,
ಪ್ರಾಯ: 70 ವರ್ಷ,
ವಾಸ: ಟಿ.ಶೆಟ್ಟಿಗೇರಿ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

**---ವಿರುದ್ಧ –**

ಆರೋಪಿ : ಅಮ್ರಜ್ ಟ್ರೇಡಿಂಗ್ ಕಂ.,
ಶಿವಾಸ್ ಕಾಂಪ್ಲೆಕ್ಸ್,
ನಂ.**88/3**, ಜೋಡುಬಿಟ್ಟಿ,
ಪೊನ್ನಂಪೇಟೆ ಟೌನ್ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.
ಪ್ರತಿನಿಧಿಸುವವರು ಮಾಲೀಕರು,
ಶ್ರೀ ಅಬ್ದುಲ್ ಹಕ್ಕಿಮ್,
ತಂದೆ: ಕೆ.ಪಿ.ಅಬ್ದುಲ್ಲಾ,
ಕುಣ್ಣತ್ ಹೌಸ್, ಕಾಟಿಕುಲಂ,
ಮಾನಂದವಾಡಿ, ವಯ್ನಾಡ್ ಜಿಲ್ಲೆ, ಕೇರಳ.

**ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಮತ್ತು ಪಿರ್ಯಾದಿದಾರರಾದ ಶ್ರೀ ಕೆ.ಎ.ವಿಶ್ವನಾಥ್, ರವರು ಪರಿಚಯರಸ್ಥರಾಗಿದ್ದು, ಆರೋಪಿಯಾದ ನೀವು ಅಮ್ರಜ್ ಟ್ರೇಡಿಂಗ್ ಕಂಪನಿ ಎಂಬ ಹೆಸರಿನಲ್ಲಿ ಕಾಫಿ ವ್ಯಾಪಾರವನ್ನು ಮಾಡುತ್ತಿದ್ದು, ದಿ:30.04.2022 ರಂದು ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ.15,00,000/- ಮೌಲ್ಯದ ರೊಬುಸ್ಟಾ ಕಾಫಿಯನ್ನು ಖರೀದಿಸಿದ್ದು, ಅದರ ಹಣದ ಮರು ಪಾವತಿಗಾಗಿ ಆರೋಪಿಯಾದ ನೀವು ರೂ.15,00,000/- ರೂಪಾಯಿಗಳಿಗೆ ದಿ:23.08.2022ರ ನಿಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಾನಂದವಾಡಿ ಶಾಖೆಯ 532361 ನಂಬರಿನ ಚೆಕ್ಕನ್ನು ನೀಡಿದ್ದು, ನಂತರ ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಿ.ಶೆಟ್ಟಿಗೇರಿ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು ದಿ:23.08.2022 ರಂದು "Funds Insufficient/Drawers signature incomplete/ illegible differs/required" ಎಂಬ ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ 15 ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿ: 27.10.2022 ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ

ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರ: ಅರ್ಥವಾಯಿತು.

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರ: ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿ.01.08.2026 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

1-8-26.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,